# ಮುಖ್ಯ ನ್ಯಾಯಾಧೀಶರು ಹಾಗೂ ನೇಮಕಾತಿ ಪ್ರಾಧಿಕಾರ ಲಘು ವ್ಯವಹಾರಗಳ ನ್ಯಾಯಾಲಯ,
## ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು-560 009

## ಅಧಿಸೂಚನೆ

**ಸಂಖ್ಯೆ: ಆ.ವಿ.1/ನೇಮಕಾತಿ/22/2019 ದಿನಾಂಕ: 8.1.2019**

ಬೆಂಗಳೂರು, ಲಘು ವ್ಯವಹಾರಗಳ ನ್ಯಾಯಾಲಯದ ಘಟಕದಲ್ಲಿ ಖಾಲಿ ಇರುವ **8 ಜವಾನರ** ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ದಿನಾಂಕ: **04.02.2019 ರ ಸಂಜೆ 5.30 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ.**

ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: - 8

**ಉಳಿಕೆ ಮೂಲ ವೃಂದದ ಹುದ್ದೆಗಳು ಒಟ್ಟು - 7**

| ಮೀಸಲಾತಿ | ಇತರೆ | ಮಹಿಳಾ | ಗ್ರಾಮೀಣ | ಅಂಗವಿಕಲ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಜಾತಿ | - | - | 1 | - | - | - | - | 1 |
| ಪರಿಶಿಷ್ಟ ಪಂಗಡ | - | - | - | 1 * | - | - | - | 1 |
| ಪ್ರವರ್ಗ-1 | - | 1 | - | - | - | - | - | 1 |
| ಪ್ರವರ್ಗ-2ಎ | - | - | - | - | - | - | - | - |
| ಪ್ರವರ್ಗ-2ಬಿ | - | - | - | - | - | - | - | - |
| ಪ್ರವರ್ಗ -3ಎ | - | - | - | - | - | - | - | - |
| ಪ್ರವರ್ಗ-3ಬಿ | - | - | - | - | - | - | - | - |
| ಸಾಮಾನ್ಯ ಅಭ್ಯರ್ಥಿ | - | 2 | 1 | - | 1 | - | - | 4 |
| **ಒಟ್ಟು** | - | **3** | **2** | 1 * | **1** | - | - | 7 |

**ಸೂಚನೆ: * ದೃಷ್ಟಿಮಾಂಧ್ಯತೆಯುಳ್ಳ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ.**

# ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಸ್ಥಳೀಯ ವೃಂದದ
## ಹುದ್ದೆಗಳು ಒಟ್ಟು (01)

| ಮೀಸಲಾತಿ | ಇತರೆ |
|---|---|
| ಪರಿಶಿಷ್ಟ ಪಂಗಡ | 1 (ಬ್ಯಾಕ್‌ಲಾಗ್) |
| **ಒಟ್ಟು** | **1 (ಬ್ಯಾಕ್‌ಲಾಗ್)** |

| | | |
|---|---|---|
| 1 | ನೇಮಕಾತಿ ವಿಧಾನ | ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ಮುಖಾಂತರ |
| 2. | ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ | **ವಿಲೇಖನಾಧಿಕಾರಿಗಳು, ಲಘು ವ್ಯವಹಾರಗಳ ನ್ಯಾಯಾಲಯ, ನಗರ ಸಿವಿಲ್ ನ್ಯಾಯಾಲಯ ಸಂಕೀರ್ಣ, ಬೆಂಗಳೂರು – 560009.** |
| 3. | ವೇತನ ಶ್ರೇಣಿ: | ರೂ.17000-400-18600-450-20400-500-22400-550-24600-600-27000-650-28950 |
| 3. | ಅಭ್ಯರ್ಥಿಗಳು ಅರ್ಜಿಗಳನ್ನು ಪಡೆಯಲು ಮತ್ತು ಸಲ್ಲಿಸಲು ಕೊನೆಯ ದಿನಾಂಕ | **ದಿನಾಂಕ: 4.2.2019 ರಂದು ಸಂಜೆ 5.30** ಗಂಟೆಯೊಳಗೆ |
| 4. | ವಿದ್ಯಾರ್ಹತೆ: | ಅಭ್ಯರ್ಥಿಯು ಏಳನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಕನ್ನಡ ಓದಲು ಮತ್ತು ಬರೆಯಲು ಬರಬೇಕು. |
| 5 | ವಯೋಮಿತಿ | ಅಭ್ಯರ್ಥಿಯು ದಿನಾಂಕ **4.2.2019** ಕ್ಕೆ 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಟ ವಯಸ್ಸು ಕೆಳಕಂಡಂತಿದೆ.<br>a. ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು<br>b. ಪ್ರವರ್ಗ-2ಎ ಯಿಂದ 3ಬಿನ ಅಭ್ಯರ್ಥಿಗಳಿಗೆ 38 ವರ್ಷ ಮೀರಿರಬಾರದು<br>c. ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು<br>d. ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ/ ಕೇಂದ್ರ ಸರ್ಕಾರಿ ನೌಕರರು / ಮಾಜಿ ಸೈನಿಕರು / ಅಂಗವಿಕಲ ಅಭ್ಯರ್ಥಿಗಳು / ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಸಡಿಲಿಕೆಯನ್ನು ನೀಡಲಾಗುವುದು |

**ಸೂಚನೆ:**

1. ಅರ್ಜಿ ನಮೂನೆಯನ್ನು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ ಲಘು ವ್ಯವಹಾರಗಳ ನ್ಯಾಯಾಲಯದ ಕಛೇರಿಯ ವೇಳೆಯಲ್ಲಿ ರೂ.10 ಶುಲ್ಕ ನೀಡಿ ಅರ್ಜಿಯನ್ನು ಪಡೆಯಬಹುದು.
2. ಬೆಂಗಳೂರು ಹೊರತುಪಡಿಸಿ ಉಳಿದ ಸ್ಥಳಗಳ ಅಭ್ಯರ್ಥಿಗಳು ಅಂಚೆಯ ಮೂಲಕ 10 ರೂ.ಗಳ ಪೋಸ್ಟಲ್ ಆರ್ಡರ್ ಮತ್ತು ಸ್ವ-ವಿಳಾಸ ಇರುವ ಲಕೋಟೆಗೆ 5.00 ರೂಪಾಯಿಗಳ ಅಂಚೆ ಚೀಟಿಯನ್ನು ಅಂಟಿಸಿ ಕಳುಹಿಸಿ ಅರ್ಜಿಯನ್ನು ಪಡೆಯಬಹುದು.
3. ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ, ಅದರ ಮೇಲೆ ಸಹಿ ಮಾಡತಕ್ಕದ್ದು.
4. ಅಭ್ಯರ್ಥಿಯು ನಿಗದಿತ ಅರ್ಜಿಯನ್ನು **ಸ್ವ-ಹಸ್ತಾಕ್ಷರದಿಂದ ಭರ್ತಿಮಾಡಿ** ಸಲ್ಲಿಸತಕ್ಕದ್ದು.
5. ಭರ್ತಿಮಾಡಿದ ಅರ್ಜಿಗಳನ್ನು ವಿಲೇಖನಾಧಿಕಾರಿಗಳು, ಲಘು ವ್ಯವಹಾರಗಳ ನ್ಯಾಯಾಲಯ, ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು-560 009 ಇವರಿಗೆ ಸಲ್ಲಿಸಲು ಕೊನೆಯ ದಿನಾಂಕ 4.2.2019 ಸಂಜೆ 5.30 ಗಂಟೆಯವರೆಗೆ.
6. ಅಭ್ಯರ್ಥಿಗಳು ಅರ್ಜಿಯೊಂದಿಗೆ ಭಾರತೀಯ ಪೋಸ್ಟಲ್ ಆರ್ಡರ್‌ಗಳನ್ನು ಮಾತ್ರ ವಿಲೇಖನಾಧಿಕಾರಿಗಳು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು ಇವರ ಹೆಸರಿಗೆ ಪಡೆದು ಸಲ್ಲಿಸಬೇಕು. (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು 50/- ರೂಪಾಯಿಗಳ ಪೋಸ್ಟಲ್ ಆರ್ಡರನ್ನು) ಹಾಗೂ ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು **200/-ರೂಗಳ** ಪೋಸ್ಟಲ್ ಆರ್ಡರ್‌ಗಳನ್ನು ಸಲ್ಲಿಸಬೇಕು. ಪೋಸ್ಟಲ್ ಆರ್ಡರ್ ಸಲ್ಲಿಸದ ಅರ್ಜಿಗಳನ್ನು ಮಾನ್ಯ

ಮಾಡಲಾಗುವುದಿಲ್ಲ. ಲಘು ವ್ಯವಹಾರಗಳ ನ್ಯಾಯಾಲಯದಿಂದ ಅರ್ಜಿ ನಮೂನೆ ಪಡೆಯದೆ ಬೇರೆ ನಮೂನೆ ಅಥವಾ ಬೆರಳಚ್ಚು ಮಾಡಿದ ನಮೂನೆಯನ್ನು ಸಲ್ಲಿಸಿದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು.

7. ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಸಂಸ್ಥೆ ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಯಿಂದ ಪಡೆದ ಎರಡು ನಡತೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. (ನಡತೆ ಪ್ರಮಾಣ ಪತ್ರವು ಅಧಿಸೂಚನೆ ದಿನಾಂಕದಿಂದ ಗರಿಷ್ಠ ಆರು ತಿಂಗಳ ಹಿಂದಿನ ಅವಧಿಯದ್ದಾಗಿರಬೇಕು).
8. ನೇಮಕಾತಿಯು ತಾತ್ಕಾಲಿಕವಾಗಿದ್ದು 2 ವರ್ಷದ ಖಾಯಂಪೂರ್ವ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
9. ಅಭ್ಯರ್ಥಿಯು ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದರೆ ಅರ್ಜಿಗಳನ್ನು ಸಮುಚಿತ ಮಾರ್ಗದಲ್ಲಿ ಅಧಿಸೂಚನೆ ದಿನಾಂಕದ ನಂತರದಲ್ಲಿ ನಿರಾಕ್ಷೇಪಣ ಪತ್ರ ಪಡೆದು ಸಲ್ಲಿಸಬೇಕು.
10. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಅಥವಾ ಇನ್ಯಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.
11. ಮೂಲ ಪ್ರಮಾಣ ಪತ್ರಗಳನ್ನು ಸಂದರ್ಶನ ಸಮಯದಲ್ಲಿ ಮಾತ್ರ ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೆಳಕಂಡ ದಾಖಲಾತಿಗಳ **ಸ್ವಯಂ ದೃಢೀಕೃತ ನಕಲನ್ನು** ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವ ಸೂಚನೆಯನ್ನೂ ನೀಡದೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1. ಹುಟ್ಟಿದ ದಿನಾಂಕದ ಬಗ್ಗೆ ಜನನ ಪ್ರಮಾಣ ಪತ್ರ ಅಥವಾ ಶಾಲಾ ವರ್ಗಾವಣೆ ಪತ್ರ ಇತ್ಯಾದಿ
2. ವಿದ್ಯಾರ್ಹತೆ ಬಗ್ಗೆ ಅಂಕಪಟ್ಟಿಗಳ ದೃಢೀಕೃತ ನಕಲು
3. ಈಗಾಗಲೇ ಸೇವೆಯಲ್ಲಿರುವವರ ಬಗ್ಗೆ ಸೇವಾ ದೃಢೀಕರಣ ಪತ್ರ
4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಡಿ' ಪ್ರಕಾರ ಪಡೆದ ಜಾತಿ ಪ್ರಮಾಣ ಪತ್ರ
5. ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಇ' ಪ್ರಕಾರ ಪಡೆದ ಜಾತಿ ಪ್ರಮಾಣ ಪತ್ರ
6. ಹಿಂದುಳಿದ ಪ್ರವರ್ಗಗಳಿಗೆ (2ಎ ಯಿಂದ 3ಬಿ) ಸೇರಿದ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯೂ.ಡಿ. 126 ಬಿಸಿಎ 2002 ದಿಃ 13.02.2003 ರಲ್ಲಿ ನಿಗಧೀಕರಿಸಿದ್ದ ಫಾರಂ 'ಎಫ್' ಪ್ರಕಾರ ಸಂಬಂಧಿತ ತಹಸೀಲ್ದಾರ್‌ರವರು ನೀಡಿರುವ ಜಾತಿ ಮತ್ತು ಆದಾಯ ದೃಢೀಕರಣ ಪತ್ರ
7. ಗ್ರಾಮೀಣ ಅಭ್ಯರ್ಥಿಗಳು ಆದೇಶ ಸಂಖ್ಯೆ ಸಿಆಸುಇ 06 ಸೇನೆನಿ 2001 ದಿಃ 13.02.2001 ರ ರೀತ್ಯಾ ನಮೂನೆ-1 ಮತ್ತು 2 ರಲ್ಲಿ ನಿಗದಿತ ನಮೂನೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಂದ ಮೇಲುರುಜು ಮಾಡಿಸಿದ ಪ್ರಮಾಣ ಪತ್ರ
8. ಮಾಜಿ ಸೈನಿಕ ಅಭ್ಯರ್ಥಿಗಳು ಅಂತಿಮ ಬಿಡುಗಡೆ ಆದೇಶದ ಪತ್ರವನ್ನು ಲಗತ್ತಿಸಿರಬೇಕು.
9. ಯೋಜನಾ ನಿರಾಶ್ರಿತ ಪ್ರವರ್ಗದಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ದೃಢೀಕರಿಸಿದ ಪತ್ರವನ್ನು ಸಲ್ಲಿಸಬೇಕು.
10. ಸಂವಿಧಾನದ ಪರಿಚ್ಛೇದ 371 ಜೆ ರನ್ವಯ ಹೈದರಬಾದ್ ಕರ್ನಾಟಕ ಪ್ರಾಂತ್ಯದಡಿಯಲ್ಲಿ ಅಧಿಸೂಚಿಸಲಾಗಿರುವ ಹುದ್ದೆಗಳಿಗೆ ಮೀಸಲಾತಿಯನ್ನು ಬಯಸುವ ಅಭ್ಯರ್ಥಿಗಳು ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಅರ್ಹತಾ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.
11. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಸೂಕ್ತ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣ ಪತ್ರವನ್ನು ಸಲ್ಲಿಸಬೇಕು.
12. ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಲಗತ್ತಿಸುವ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. ದೃಢೀಕರಣವಿಲ್ಲದೆ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು
13. ಭರ್ತಿ ಮಾಡಿದ ಅರ್ಜಿ, ಅಡಕಗಳೊಂದಿಗೆ ಅಭ್ಯರ್ಥಿಗಳು ಸ್ವ-ವಿಳಾಸ ಬರೆದು 5/-ರೂ.ಗಳ ಅಂಚೆ ಚೀಟಿಯನ್ನು ಲಗತ್ತಿಸಿ ಲಕೋಟೆಯನ್ನು ಸಲ್ಲಿಸುವುದು. ಸಂದರ್ಶನಕ್ಕೆ ಅರ್ಹರಾಗುವ ಅಭ್ಯರ್ಥಿಗಳಿಗೆ ಸದರಿ ಲಕೋಟೆಯಲ್ಲಿ ಸಂದರ್ಶನ ತಿಳುವಳಿಕೆ ಪತ್ರವನ್ನು ಕಳುಹಿಸುವ ಸಲುವಾಗಿ.

Shalaneel Verde 8/1/19

ಮುಖ್ಯ ನ್ಯಾಯಾಧೀಶರು ಹಾಗೂ ನೇಮಕಾತಿ ಪ್ರಾಧಿಕಾರ
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು